ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ಸಂ. 46.

ಬೆಂಗಳೂರು, ಗುರುವಾರ, ನವೆಂಬರ್ ತಾ|| 25, ಸನ್ 1909.

II ನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಗೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟ್.

ಇಸ್ತಿಹಾರ್‌ನಾಮೆ.

ನಂ. 317, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕಿನ 228 ಸರಕಾರಿ ಗ್ರಾಮಗಳ ರಿವಿಜ್ ಸರ್ವೆ ಸೆಟ್ಲ್‌ಮೆಂಟ್ ಆಕಾರಪಡ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಈಸಬಾ ಶಿರಾ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 10ನೆ ಶುಕ್ರವಾರ ಅಥವಾ ಆ ಸುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ನಂ. 323, ತಾರೀಖು 20ನೆ ನವೆಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟ್ ಪಾವಗಡ ತಾಲ್ಲೂಕಿನ 140 ಸರಕಾರಿ ಗ್ರಾಮಗಳ ರಿವಿಜ್ ಸರ್ವೆ ಸೆಟ್ಲ್‌ಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಈಸಬಾ ಪಾವಗಡದ ಮೊಕ್ಕಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 6ನೆ ತಾರೀಖು ಸೋಮವಾರ ಅಥವಾ ಆ ಸುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ಶ್ಯಾಮರಾವ್,
ಸೂಪರ್‌ಟೆಂಡೆಂಟ್, ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್.

ಅಮೃತಮಹಲ್ ಇಲಾಖೆ.

ನೋಟಿಫಿಕೇಷನ್.

ಕ್ಯಾಂಪು ಮೈಸೂರು, ತಾರೀಖು 14ನೆ ನವೆಂಬರು 1909.

ಅಮೃತಮಹಲ್ ಇಲಾಖಾ ಕೆಲವು ಗಂಡು ರಾಸುಗಳನ್ನು 6—12—1909ರ ಲಾಗಾಯಿತು ಮಾಗಡಿ ತಾಲ್ಲೂಕು "ಬಗನೆಗೆರೆ" ಕಾವಲಿನಲ್ಲಿಯು (ಅಂದರೆ ಕುಣಿಗಲ್-ಬೆಂಗಳೂರು ರಸ್ತೆಯ 38ನೆ ಮೈಲಿಯು ಸನಿಹಪ) ಮತ್ತು 12—12—09ರ ಲಾಗಾಯಿತು ಅರಕೀಕೆರೆ ತಾಲ್ಲೂಕು "ಗಂಡಸಿ" ಬಂಗ್ಲೆ ಬಳಿಯಲ್ಲಿಯೂ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟ ವುಳ್ಳವರು ಹಾಜರಾಗಿ ಛಡಸವಾಲಿನಲ್ಲಿ ರಾಸುಗಳನ್ನು ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್, ಸೂಪರ್‌ಟೆಂಡೆಂಟ್.